ವಿಷಯ:- ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 481 (1051)

ಶ್ರೀ ಸಿ.ಆರ್.ಸಗೀರ್ ಅಹಮದ (ಚಿಕ್ಕಮಗಳೂರು):- ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 1993-94, 1994-95, 1995-96ನೇ ಸಾಲಿನಲ್ಲಿ ಹೊಸದಾಗಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಆ) ಹೊಸದಾಗಿ ಪ್ರಾರಂಭಿಸಲಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಾಣ ಯಾವ ಹಂತದಲ್ಲಿದೆ?

ಇ) ಈ ಎಲ್ಲಾ ಕಟ್ಟಡಗಳಿಗೆ ವೆಚ್ಚವಾಗಿರುವ ಹಣವೆಷ್ಟು? ಈ ಕಟ್ಟಡಗಳ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಸಚಿವರು):-

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 5 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿದೆ.

ವಿವರ ಕೆಳಗಿನಂತಿದೆ:-

	ತಾಲ್ಲೂಕು	1993-94	94-95	95-96
1)	ಚಿಕ್ಕಮಗಳೂರು	1	1	-
2)	ಕಡೂರು	1	-	2
3)	ತರೀಕೆರೆ	-	1	-
	ಒಟ್ಟು	2	2	2

ಆ) ಆವುತಿ ಗ್ರಾಮದ ಕಟ್ಟಡವು ಲಿಂಟಲ್ ಹಂತದಲ್ಲಿರುತ್ತದೆ. ಮಾರಗೊಂಡನಹಳ್ಳಿ ಕಟ್ಟಡದ ಮೇಲ್ಛಾವಣಿಯ ಹಂತದಲ್ಲಿರುತ್ತದೆ.

ಇ) 1996 ಮಾರ್ಚ್ ಅಂತ್ಯಕ್ಕೆ ಒಟ್ಟು 3,56,003 ರೂ.ಗಳು ಖರ್ಚಾಗಿರುತ್ತವೆ. ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿನ ಅನುದಾನದ ಲಭ್ಯತೆ ಜೊತೆಗೆ ಕಟ್ಟಡ ಕೆಲಸವನ್ನು ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ರಾಜ್ಯದಲ್ಲಿರುವ ಸರ್ಕಾರಿ ಪದವೀಧರ ಕಾಲೇಜುಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 482 (1013)

ಶ್ರೀ ಶಿವಾನಂದ ಎಸ್.ಪಾಟೀಲ್ (ತಿಕೋಟ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪದವೀಧರ ಕಾಲೇಜುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು.)

ಆ) ರಾಜ್ಯದಲ್ಲಿ ಯಾವ ಯಾವ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಸರ್ಕಾರಿ ಪದವೀಧರ ಕಾಲೇಜುಗಳು ಇರುವುದಿಲ್ಲ.

ಇ) ಬಿಜಾಪುರದಲ್ಲಿ ಸರ್ಕಾರಿ ಪದವೀಧರ ಕಾಲೇಜು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):-

ಅ) ಒಟ್ಟು 139.

(1) ಬೆಂಗಳೂರು ನಗರ	10
(2) ಬೆಂಗಳೂರು ಗ್ರಾಮಾಂತರ	7
(3) ತುಮಕೂರು	10
(4) ಕೋಲಾರ	9
(5) ಮೈಸೂರು	9
(6) ಮಂಡ್ಯ	4
(7) ಹಾಸನ	9
(8) ಶಿವಮೊಗ್ಗ	11
(9) ಚಿತ್ರದುರ್ಗ	8
(10) ಚಿಕ್ಕಮಗಳೂರು	7
(11) ದಕ್ಷಿಣ ಕನ್ನಡ	13
( ) ಕೊಡಗು	4
( ) ಧಾರವಾಡ	10

(14) ಉತ್ತರ ಕನ್ನಡ	4
(15) ಬೆಳಗಾಂ	2
(16) ಬಿಜಾಪುರ	2
(17) ಗುಲ್ಬರ್ಗಾ	10
(18) ರಾಯಚೂರು	7
(19) ಬಳ್ಳಾರಿ	5
(20) ಬೀದರ್	1
	139

ಆ) 68 ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ ಸರ್ಕಾರಿ ಪದವಿ ಕಾಲೇಜು ಇರುವುದಿಲ್ಲ (ಅನುಬಂಧ-ಅ) ಲಗತ್ತಿಸಿದೆ.

ಇ) ಬಂದಿದೆ.

ಈ) ಬೇಡಿಕೆ ಬಂದಲ್ಲಿ ಪರಿಶೀಲಿಸಲಾಗುವುದು.

ಅನುಬಂಧ - ಅ

ಸರ್ಕಾರಿ ಪದವಿ ಕಾಲೇಜುಗಳು ಇಲ್ಲದೇ ಇರುವ ತಾಲ್ಲೂಕಿನ ಕೇಂದ್ರ ಸ್ಥಳಗಳ ವಿವರಗಳ ಪಟ್ಟಿ.

ಬೆಂಗಳೂರು ಜಿಲ್ಲೆ

1. ಕನಕಪುರ
2. ನೆಲಮಂಗಲ

ಕೋಲಾರ ಜಿಲ್ಲೆ

1. ಬಾಗೇಪಲ್ಲಿ
2. ಗೌರಿಬಿದನೂರು
3. ಗುಡಿಬಂಡೆ

ತುಮಕೂರು ಜಿಲ್ಲೆ

1. ಮಧುಗಿರಿ
2. ತಿಪಟೂರು

ಗುಲ್ಬರ್ಗಾ ಜಿಲ್ಲೆ

1. ಆಳಂದ್
2. ಚಿಂಚೋಳಿ

ಬೀದರ್ ಜಿಲ್ಲೆ

1. ಜಾರದ್
2. ಬಸವಕಲ್ಯಾಣ
3. ಬಾಲ್ಕಿ
4. ಹುಮ್ನಾಬಾದ್

ಬೆಳಗಾಂ ಜಿಲ್ಲೆ

1. ಬೆಳಗಾಂ

ಚಿತ್ರದುರ್ಗ ಜಿಲ್ಲೆ

1. ಹರಿಹರ
2. ಹೊಳಲಕೆರೆ
3. ಜಗಳೂರು

ಶಿವಮೊಗ್ಗ ಜಿಲ್ಲೆ

1. ತೀರ್ಥಹಳ್ಳಿ
2. ಶಿವಮೊಗ್ಗ

ಮೈಸೂರು ಜಿಲ್ಲೆ

1. ಗುಂಡ್ಲುಪೇಟೆ
2. ನಂಜನಗೂಡು
3. ಟಿ.ನರಸೀಪುರ
4. ಯಳಂದೂರು

ಮಂಡ್ಯ ಜಿಲ್ಲೆ

1. ಮದ್ದೂರು
2. ಮಳವಳ್ಳಿ
3. ನಾಗಮಂಗಲ
4. ಪಾಂಡವಪುರ

ಹಾಸನ ಜಿಲ್ಲೆ

1. ಅಲೂರು
2. ಚೆನ್ನರಾಯಪಟ್ಟಣ

ಚಿಕ್ಕಮಗಳೂರು ಜಿಲ್ಲೆ

1. ಶೃಂಗೇರಿ

ಕೊಡಗು ಜಿಲ್ಲೆ

1. ವೀರಾಜಪೇಟೆ
2. ಚಿಕ್ಕೋಡಿ
3. ಗೋಕಾಕ್
4. ಹುಕ್ಕೇರಿ
5. ಖಾನಾಪುರ
6. ರಾಮದುರ್ಗ
7. ರಾಯಬಾಗ್
8. ಸೌಂದತ್ತಿ

ಬಿಜಾಪುರ ಜಿಲ್ಲೆ

1. ಬಾದಾಮಿ
2. ಬಾಗಿಲಕೋಟೆ
3. ಬಾಗೇವಾಡಿ
4. ಬಿಜಾಪುರ
5. ಹುನ್‌ಗುಂದ್
6. ಇಂಡಿ
7. ಮುದ್ದೇಬಿಹಾಳ್
8. ಮುದೋಳ್
9. ಸಿಂಧಗಿ

ಉತ್ತರ ಕನ್ನಡ ಜಿಲ್ಲೆ

1. ಅಂಕೋಲ
2. ಭಟ್ಕಳ
3. ಹೊನ್ನವರ
4. ಕುಮಟ
5. ಶಿರ್ವಾಪುರ
6. ಸಿರ್ಸಿ

2. ಮಡಿಕೇರಿ

ಬಳ್ಳಾರಿ ಜಿಲ್ಲೆ

1. ಹಡಗಲಿ
2. ಹರಪನಹಳ್ಳಿ
3. ಸೊಂಡೂರು

ರಾಯಚೂರು ಜಿಲ್ಲೆ

1. ಕೊಪ್ಪಳ
2. ಲಿಂಗಸೂಗೂರು.
7. ಸೂಪ

ಧಾರವಾಡ ಜಿಲ್ಲೆ

1. ಬ್ಯಾಡಗಿ
2. ಗದಗ್
3. ಹುಕ್ಕೇರಿ
4. ಹುಬ್ಬಳ್ಳಿ
5. ಕಲಘಟಗಿ
6. ಮುಂಡಗಿ
7. ನವಲಗುಂದ್
8. ರಾಣಿಬೆನ್ನೂರು.

ವಿಷಯ:- ಹೊಸಕೋಟೆ ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರ ಕೊರತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 483 (1056)

ಶ್ರೀ ಜಿ.ಶಂಕರಗೌಡ (ಹೊಸಕೋಟೆ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಪೇಟೆ ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದು ಕೊರತೆಯನ್ನು ತುಂಬಲು ಸರ್ಕಾರದವರು ಕೂಡಲೇ ಶಿಕ್ಷಕರನ್ನು ನೇಮಿಸಲು ಕ್ರಮ ಕೈಗೊಳ್ಳುವರೇ; ತೆಲುಗು, ತಮಿಳು, ಹಾಗೂ ಉರ್ದು ಶಿಕ್ಷಣದ ಕೆಲವು ಶಾಲೆಗಳಲ್ಲಿನ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗಿದ್ದು ಈ ಶಿಕ್ಷಕರನ್ನು ನೇಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಹೊಸಪೇಟೆ ತಾಲ್ಲೂಕಿನ ಶಾಲೆಗಳನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬಲು ಸರ್ಕಾರದ ಕ್ರಮ ಕೈಗೊಂಡಿದೆ. ನೇಮಕಾತಿ ಪ್ರಕ್ರಿಯೆಗಳು ಈಗಾಗಲೇ ಪ್ರಾರಂಭವಾಗಿವೆ. ಪ್ರೌಢ ಶಾಲೆಗಳು ಹಾಗೂ ಪ್ರಾಥಮಿಕ ಶಾಲೆಗಳಿಗೆ ಕ್ರಮವಾಗಿ ಆಗಸ್ಟ್ ಮತ್ತು ಸೆಪ್ಟೆಂಬರ್ ಅಂತ್ಯಕ್ಕೆ ನೇಮಕಾತಿ ಪ್ರಕ್ರಿಯೆ ಮುಗಿಸಲಾಗುವುದು. ಸದರಿ ನೇಮಕಾತಿಯಲ್ಲಿ ಇತರೆ ಶಿಕ್ಷಕರೊಂದಿಗೆ ತೆಲುಗು, ತಮಿಳು ಹಾಗೂ ಉರ್ದು ಶಿಕ್ಷಕರನ್ನು ಸಹ ನೇಮಕಾತಿ ಮಾಡಲಾಗುವುದು.